ದಿಂದ ವೀಕ್ಷಿಸುತ್ತ, ಅತ್ಯಂತ ಭಕ್ತಿಪೂರ್ವಕವಾಗಿ ಸ್ತೋತ್ರ ಮಾಡುತ್ತಿದ್ದರು. ಆ ಸ್ತೋತ್ರಗಳನ್ನು ಅವರ ಸಹೋದರನು ಬರೆದುಕೊಳ್ಳುತ್ತಿದ್ದನು. ಹೀಗೆ ಪ್ರತಿದಿನವೂ ಒಂದೊಂದು ಅಧ್ಯಾಯವನ್ನು ರಚಿಸಿದರು. ನೂರು ದಿವಸಗಳ ನಂತರ, ನೂರು ಅಧ್ಯಾಯಗಳಲ್ಲಿ ಅಂತರ್ಗತವಾದ ೧,೦೩೬ ಶ್ಲೋಕಗಳಿರುವ ಕೃತಿಯೊಂದು ಪೂರ್ಣಗೊಂಡಿತು. ಪ್ರತಿ ಅಧ್ಯಾಯದ ಕಡೆಯಲ್ಲಿ, ತಮ್ಮನ್ನು ಕಾಡುತ್ತಿದ್ದ ರೋಗಬಾಧೆಯಿಂದ ಮುಕ್ತನನ್ನಾಗಿ ಮಾಡಿ, ಉತ್ತಮ ಭಕ್ತನನ್ನಾಗಿ ಮಾಡಬೇಕೆಂದು ವ್ಯಾಕುಲ ಚಿತ್ತರಾಗಿ ಭಗವಂತನನ್ನು ಪ್ರಾರ್ಥಿಸುತ್ತಿದ್ದರು. ಹೀಗೆ ಮಾಡುತ್ತ, ಅವರ ಮನಸ್ಸು ಸಂಪೂರ್ಣವಾಗಿ ಭಗವಂತನಲ್ಲಿ ನೆಲೆಗೊಂಡಿತು. ದಿನಗಳು ಕಳೆದಂತೆ ತಮ್ಮ ಸ್ತುತಿಯಿಂದ ಭಗವಂತನು ಸುಪ್ರೀತನಾಗುವುದನ್ನು ಭಟ್ಟತಿರಿಗಳು ಮನಗಾಣುತ್ತಿದ್ದರು.

ನೂರು ದಿವಸಗಳ ನಂತರ, ತೀವ್ರ ಸಾಧನೆಯ ಫಲವಾಗಿ ದೇವಸ್ಥಾನದ ಗರ್ಭಮಂದಿರದಲ್ಲಿ ಅವರಿಗೆ ಶ್ರೀಕೃಷ್ಣನ ದರ್ಶನ ದೊರೆಯಿತು. ಇದರಿಂದ ಅವರು ಆನಂದಪರವಶರಾಗಿ, ಕಡೆಯ ಅಧ್ಯಾಯದಲ್ಲಿ ಭಗವಂತನ ಆನಂದಸ್ವರೂಪವನ್ನು ಮನೋಹರವಾದ ಭಾಷೆಯಲ್ಲಿ ವರ್ಣಿಸತೊಡಗಿದರು.

ಅವರು ಹತ್ತು ಶ್ಲೋಕಗಳಲ್ಲಿ ಭಗವಂತನ ಸ್ವರೂಪವನ್ನು ಶಿರದಿಂದ ಪಾದದವರೆಗೆ ವರ್ಣಿಸಿದ್ದಾರೆ. ಕೊನೆಯ ಶ್ಲೋಕದಲ್ಲಿ ತಾವು ಅಜ್ಞಾನದಿಂದ ಮಾಡಿರಬಹುದಾದ ಅಪರಾಧಗಳಿಗೆ ಕ್ಷಮೆಯನ್ನು ಕೇಳಿಕೊಂಡರು. ಕಡೆಗೆ ಈ ಸ್ತೋತ್ರರತ್ನವನ್ನು ಗುರುವಾಯೂರಪ್ಪನಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಸಮರ್ಪಿಸಿದರು. ಆ ಕಾಲಕ್ಕೆ, ಅವರು ರೋಗದಿಂದ ಸಂಪೂರ್ಣವಾಗಿ ವಿಮುಕ್ತರಾಗಿದ್ದುದು ಮಾತ್ರವಲ್ಲದೆ, ಶುದ್ಧಭಕ್ತಿ ಮತ್ತು ಶುದ್ಧಜ್ಞಾನಸಂಪನ್ನರಾಗಿದ್ದರು.

ಹೀಗೆ ಶರೀರಬಾಧೆಯ ನಿವಾರಣೆಗಾಗಿ ಭಗವಂತನನ್ನು ಸಮೀಪಿಸಿ, ಆತ್ಮಜ್ಞಾನವನ್ನು ಪಡೆದುಕೊಂಡ ಭಕ್ತರು ನಾರಾಯಣ ಭಟ್ಟತಿರಿಗಳು. ಅವರು ಶ್ರೀಕೃಷ್ಣನ ಸಮ್ಮುಖದಲ್ಲಿ ರಚಿಸಿದ ಗ್ರಂಥವು ಭಾಗವತದ ಸಂಕ್ಷಿಪ್ತ ರೂಪವಾಗಿದೆ. ಬಹು ಸುಂದರವಾದ ಕಾವ್ಯಪ್ರೌಢಿಮೆಯಿಂದಲೂ, ಗಹನವೇದಾಂತ ತತ್ತ್ವಗಳಿಂದಲೂ ಕೂಡಿದ ಈ ಕೃತಿಯು **'ನಾರಾಯಣೀಯಂ'** ಎಂದು ಪ್ರಸಿದ್ಧವಾಗಿದ್ದು, ಕೇರಳದಲ್ಲಿ ಅತ್ಯಂತ ಜನಪ್ರಿಯವಾಗಿದೆ. "ಭಗವಂತನಿಗೆ ಶರಣಾಗಿ ವ್ಯಾಕುಲದಿಂದ ಕರೆದರೆ, ಅವನು ನಮ್ಮ ಪ್ರಾರ್ಥನೆಯನ್ನು ಕೇಳಿಯೇ ಕೇಳುತ್ತಾನೆ: ಎಲ್ಲವೂ ಸುಗಮವಾಗುವಂತೆ ಮಾಡುತ್ತಾನೆ" ಎಂಬ ಶ್ರೀರಾಮಕೃಷ್ಣರ ಉಕ್ತಿಗೆ ಪ್ರತ್ಯಕ್ಷ ನಿದರ್ಶನವಾಗಿದ್ದಾರೆ ನಾರಾಯಣ ಭಟ್ಟತಿರಿ ಅವರು. ✪

## ಭಗವಂತನನ್ನು ಅರಸುತ್ತ

ಸ್ವಾಮಿ ಯತೀಶ್ವರಾನಂದ

ದಿವ್ಯತೆಯು ಅಭಿವ್ಯಕ್ತವಾಗುವ ವಿವಿಧ ನೆಲೆಗಳು

**ಒಮ್ಮೆ** ಶ್ರೀರಾಮಕೃಷ್ಣರು ಬ್ರಹ್ಮವು ಶಬ್ದವಾಗಿ ಅಭಿವ್ಯಕ್ತಗೊಂಡಿದೆ ಎಂದರು. ಆಗ ರಾಖಾಲ (ಸ್ವಾಮಿ ಬ್ರಹ್ಮಾನಂದರು) ಆ ವಿಷಯದ ಮೇಲೆ ಧ್ಯಾನ ಮಾಡಿದರು. ಭಗವಂತನ ಶಬ್ದಸ್ವರೂಪವು ಅವರಿಗೆ ಪ್ರಕಟವಾಯಿತು. ಅದರ ಹೆಸರು *ಶಬ್ದಬ್ರಹ್ಮ* ಎಂದು. ಈ ವಿಶ್ವದ ಎಲ್ಲ ಕಡೆಗಳಲ್ಲಿಯೂ ಎಲ್ಲಾ ಕಾಲದಲ್ಲಿಯೂ ಶಬ್ದದ ಅಲೆಗಳು ಇರುತ್ತವೆ. ನಾವು ನಮ್ಮ ವಾಗಿಂದ್ರಿಯದ ಮೂಲಕ ನಮ್ಮ ಭಾವನೆಗಳನ್ನು ವ್ಯಕ್ತಪಡಿಸಿದಾಗ, ಆ *ಶಬ್ದಬ್ರಹ್ಮದ* ಸಂಪರ್ಕ ಪಡೆಯುತ್ತೇವೆ. ಆಗ ನಾವು ಶಬ್ದವನ್ನು ಉತ್ಪನ್ನ ಮಾಡುತ್ತೇವೆ. ಇಡೀ ಸೃಷ್ಟಿಯೇ ಪರಮ ತತ್ತ್ವದಿಂದ ವ್ಯಾಪಿಸಲ್ಪಟ್ಟಿದೆ. ನಮ್ಮ ವೈಯಕ್ತಿಕ ದೇಹಕ್ಕೆ ಸಂಬಂಧಪಟ್ಟ ಹಾಗೆಯೇ ವಿಶ್ವಶರೀರವೂ ಇದೆ. ಅದೇ ನಾವು ಕಾಣುತ್ತಿರುವ ಪ್ರಪಂಚವಾಗಿದೆ. ಹಾಗೆಯೇ ನಮ್ಮ ವೈಯಕ್ತಿಕ ಮನಸ್ಸಿಗೆ ಸಂಬಂಧಿಸಿದ ಹಾಗೆ, ವಿಶ್ವ ಮನಸ್ಸು ಕೂಡಾ ಇದೆ. ಅದೇ ಭಾವನೆಗಳ ಪ್ರಪಂಚವಾಗಿ ಪರಿಣಮಿಸಿರುವುದು. ಅದರಂತೆಯೇ, ನಮ್ಮ ವೈಯಕ್ತಿಕ ಆತ್ಮಕ್ಕೆ ಸಂಬಂಧಿಸಿದ ಹಾಗೆ, ವಿಶ್ವಾತ್ಮವೂ ಇದೆ. ಅದು ಪರಿಶುದ್ಧ, ಸರ್ವವ್ಯಾಪಿಯಾದ ಚೈತನ್ಯ ಸ್ವರೂಪದ್ದಾಗಿದೆ. ಹೀಗಾಗಿ, ಇಡೀ ಪ್ರಪಂಚವು ಭಗವಂತನಲ್ಲದೆ ಬೇರಲ್ಲ. ನಮ್ಮ ಮುಂದಿರುವ ಕಾರ್ಯವೆಂದರೆ, ನಮ್ಮನ್ನು ವಿಶ್ವಾತ್ಮದೊಡನೆ ಸಂಯೋಜಿಸಿಕೊಳ್ಳುವುದೇ ಆಗಿದೆ. ಆ ಕಾರ್ಯ ಹಿಂದೆ ಹೇಳಿದ ಮೂರೂ ಹಂತಗಳಲ್ಲಿ ನಡೆಯಬೇಕು. ನಮ್ಮ ಆಲೋಚನೆಗಳೆಲ್ಲವೂ ವಿಶ್ವಮಾನಸದೊಂದಿಗೆ ಸಂಪರ್ಕ ಹೊಂದಬೇಕು.

ಭಗವಂತನು ಸಾಕಾರಿಯೂ ಹೌದು, ನಿರಾಕಾರಿಯೂ ಹೌದು. ನಮಗೆ ದೇಹಪ್ರಜ್ಞೆ ಇರುವವರೆಗೆ, ನಾವು ಈ ಶರೀರವನ್ನು ಒಂದು ದೇಗುಲದಂತೆಯೂ, ಭಗವಂತನ ಮೂರ್ತಿಯು ನಮ್ಮ ಹೃದಯಗಳಲ್ಲಿ ಪ್ರಕಾಶಿಸುತ್ತಿದೆಯೆಂದೂ ಭಾವಿಸಬೇಕು. ನಾವು ಮಾನಸಿಕವಾಗಿ ಈ ದೇಗುಲದ ಗರ್ಭಗುಡಿಯನ್ನು ಪ್ರವೇಶಿಸಿ, ಇಷ್ಟಮೂರ್ತಿಯನ್ನು ಪೂಜಿಸಬೇಕು. ಧ್ಯಾನದ ಸಮಯದಲ್ಲಿ ಈ ಕಲ್ಪನೆಯನ್ನು ಜ್ವಲಂತವಾಗಿರಿಸಿಕೊಳ್ಳಬೇಕು.

ನಮ್ಮ ದೇಹದಲ್ಲಿ ಆರು ಚಕ್ರಗಳಿವೆ. ಕೆಳಗಿನ ಮೂರು ಚಕ್ರಗಳ ಅಂದರೆ ನಾಭಿಯ ಕೆಳಗಿರುವವುಗಳ ಕಾರ್ಯದಿಂದ ನಮ್ಮಲ್ಲಿ ಪ್ರಾಣಿಸಹಜ ಗುಣಗಳು ಕಂಡುಬರುತ್ತವೆ. ನಾಲ್ಕನೆಯ ಚಕ್ರವು ಹೃದಯಭಾಗದಲ್ಲಿದೆ. ಸಾಧನದ ಪ್ರಾರಂಭಿಕ ನೆಲೆಯಲ್ಲಿರುವವನು ಹೃದಯಭಾಗದಲ್ಲಿ ಧ್ಯಾನ ಮಾಡಬೇಕು. ನಿಯಮಿತ ಧ್ಯಾನಾನುಷ್ಠಾನದಿಂದ ಪ್ರಜ್ಞೆಯ ಅವತರಣವು ಅಲ್ಲಿ ಉಂಟಾಗುವುದು. ಅನಂತರ, ಸಾಧಕನು ಆರನೆಯ ಚಕ್ರದಲ್ಲಿ ಧ್ಯಾನಿಸಬೇಕು. ಅದು ಎರಡು ಕಣ್ಣುಗಳ ರೆಪ್ಪೆಗಳ ಮಧ್ಯದಲ್ಲಿದೆ. ಇದು ಆಧ್ಯಾತ್ಮಿಕ ಜೀವನದ ಅತ್ಯಂತ ಉನ್ನತ ಹಂತವಾಗಿದೆ.

ಮನಸ್ಸು ಚಂಚಲ. ಕೆಲವು ದಿನಗಳು ಅದು ಆಧ್ಯಾತ್ಮಿಕ ಭಾವದಲ್ಲಿರುತ್ತದೆ. ಮತ್ತೆ ಕೆಲವು ಸಮಯದಲ್ಲಿ, ನಾವು ಕೆಳಮಟ್ಟದ ಭಾವನೆಗಳಿಗೆ ಒಳಗಾಗುತ್ತೇವೆ. ಈ ವೈಪರೀತ್ಯಗಳು ಉಂಟಾಗುವುದಕ್ಕೆ ಹಿಂದೆ ಹೇಳಿದ ಒಂದು ಪ್ರಜ್ಞಾಕೇಂದ್ರದಿಂದ ಇನ್ನೊಂದು ಪ್ರಜ್ಞಾಕೇಂದ್ರಕ್ಕೆ ಮನಸ್ಸು ಸ್ಥಾನಪಲ್ಲಟವಾಗುತ್ತಿರುವುದೇ ಕಾರಣ. ಮಿದುಳಿನ ಭಾಗದಲ್ಲಿರುವ ಸಹಸ್ರಾರ ಚಕ್ರದಲ್ಲಿ ಮನಸ್ಸು ವಿಲೀನಗೊಂಡಾಗ ಎಲ್ಲ ರೀತಿಯ ಚಂಚಲತೆಯೂ ಮಾಯವಾಗುತ್ತದೆ. ಆಗ ಮನಸ್ಸು ಹಿಂತಿರುಗಿ ಬರುವುದಿಲ್ಲ.

ಹೀಗೆ ವಿವಿಧ ಚಕ್ರಗಳನ್ನು ನಮ್ಮ ಪ್ರಜ್ಞೆಯು ಸ್ಪರ್ಶಿಸುವುದರಿಂದ, ನಮಗೆ ವಿವಿಧ ಹಂತಗಳ ಆಧ್ಯಾತ್ಮಿಕ ಅನುಭವಗಳು ಆಗುತ್ತವೆ. ಕೆಲವೊಮ್ಮೆ ನಮ್ಮ ಹೃದಯದ ಬಡಿತ ಅಧಿಕವಾಗುವುದುಂಟು. ಇದು ಕೇವಲ ಮನೋವೈಜ್ಞಾನಿಕ ಕಾರಣಗಳಿಂದ ಉಂಟಾಗಿರಬಹುದು. ಅಥವಾ ನಮ್ಮ ಎದೆಯ ಭಾಗದಲ್ಲಿ ಅಥವಾ ತಲೆಯ ಭಾಗದಲ್ಲಿ, ದೈಹಿಕ ಕಾರಣಗಳಿಂದ ನೋವು ಉಂಟಾಗಬಹುದು; ಕೆಲವೊಮ್ಮೆ ಅದು ಆಧ್ಯಾತ್ಮಿಕ ಆನಂದದ ಆಭಾಸವೂ ಆಗಿರಬಹುದು.

ಆಧ್ಯಾತ್ಮಿಕ ಅನುಭವವು ಮೇಲಿನ ಎಲ್ಲ ಅನುಭವಗಳಿಗಿಂತಲೂ ಭಿನ್ನವಾದುದು. ಅದರ ಆನಂದವನ್ನು ವ್ಯಕ್ತಪಡಿಸಲಾಗದು. ಲಾಟು ಮಹಾರಾಜ್ (ಸ್ವಾಮಿ ಅದ್ಭುತಾನಂದಜಿ) ಹೇಳುತ್ತಾರೆ, "ಪ್ರೀತಿಯನ್ನು ಹೇಗೆ ಶಬ್ದಗಳಲ್ಲಿ ವ್ಯಕ್ತಪಡಿಸಲಾಗದೋ ಹಾಗೆಯೆ, ಭಗವಂತನನ್ನೂ ನಾವು ಶಬ್ದಗಳ ಮೂಲಕ ವಿವರಿಸಲಾರೆವು. ಕೇವಲ ಪ್ರೇಮಿ ಮತ್ತು ಪ್ರಿಯತಮ ಮಾತ್ರವೇ ಪ್ರೇಮವೆಂದರೇನೆಂಬುದನ್ನು ತಿಳಿದಿರುತ್ತಾರೆ!"

(ಮುಂದಿನ ತಿಂಗಳು: ಸಾಧನೆಯಿಂದಾಗುವ ಆಧ್ಯಾತ್ಮಿಕ ಆನಂದ)